# ಬಸವಣ್ಣನವರ ದೃಷ್ಟಿಯಲ್ಲಿ ಅಸ್ಪೃಶ್ಯತೆ

**ಸುನೀತಾ ಮಹೇಶ್ವರಿ**

ಅತಿಥಿ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜ್ಞಾನ ಕಾರಂಜಿ, ಬೀದರ ವಿಶ್ವವಿದ್ಯಾಲಯ, ಬೀದರ.

**Received:** 12-07-2024 ; **Acepted:** 05-09-2024 ; **Published:** 02-10-2024

**DOI: https://doi.org/10.5281/zenodo.13871042**

**ABSTRACT:**

೧೨ನೇ ಶತಮಾನದ ಆಂದೋಲನದ ನಾಯಕ ಮತ್ತು ಕೇಂದ್ರ ವ್ಯಕ್ತಿ ಆದ ಬಸವಣ್ಣ ಸಾಹಿತ್ಯದೃಷ್ಟಿಯಿಂದ ನೋಡಿದಾಗ ಆತ ಒಬ್ಬ ಅತ್ಯುತ್ತಮ ಕೃತಿಕಾರ ಸಮಾನತೆಯ ತತ್ವವನ್ನು ಸಾರಿದ ಹರಿಕಾರ ಎಂದು ಹೇಳುವುದು ಆಕಸ್ಮಿಕವೇ ಸರಿ. ಆತ ಹುಟ್ಟಿದ್ದು ಬಿಜಾಪುರ್ ಜಿಲ್ಲೆಯ ಬಸವನಬಾಗೇವಾಡಿ ಅಗ್ರಹಾರ ಎಂಬ ಊರಲ್ಲಿ ೧೧೩೪ಳಲ್ಲಿ ಜನನವಾಯಿತು. ತಂದೆ ಮಾದರಸ ತಾಯಿ ಮಾದಲಾಂಬಿಕೆ. ಇವರು ಬಾಲ್ಯದಿಂದಲೇ ವೈದಿಕ ಸಂಸ್ಕೃತಿಯ ವಿರೋಧಿಗಳಾಗಿದ್ದರು. ಇವರು ಹುಟ್ಟಿದ್ದು ಉತ್ತಮ ಬ್ರಾಹ್ಮಣ ಮನೆತನದಲ್ಲಿ ಆದರು ದಲಿತ ವರ್ಗದ ಜೊತೆ ಬೆರೆತು ಅವರಿಗಾಗಿ ತನ್ನ ಜೀವನದುದ್ದಕ್ಕೂ ಹೋರಾಡಿದನೆಂದು ತಿಳಿದು ಬರುತ್ತದೆ. ಹೊಸ ಹೊಸ ಬಗೆಯ ಅನೇಕ ಸುಧಾರಣೆಗಳನ್ನು ಜಾರಿಗೆ ತಂದು ನಮ್ಮ ಆಡಳಿತವನ್ನು ಸರಳಗೊಳಿಸಿದರು. ಎಲ್ಲಾ ಶರಣರನ್ನು ಕೂಡಿಸಿ ಎಲ್ಲಾ ಜಾತಿಯವರೊಡನೆ ತಮ್ಮನ್ನು ತಾವು ತೊಡಗಿಸಿಕೊಂಡು ಸಮಾನತೆಯ ತತ್ವವನ್ನು ಬೀರಿದರು. ಹೀಗೆ ಸಮಾನತೆಯ ತತ್ವವನ್ನು ಸಾರಿದ ಬಸವಣ್ಣನವರ ವಚನಗಳಲ್ಲಿ ಅಸ್ಪೃಶ್ಯತೆ ಹೇಗೆ ಮೂಡಿ ಬಂದಿದೆ ಎಂದು ಈ ಲೇಖನದಲ್ಲಿ ಚರ್ಚಿಸಲಾಗಿದೆ.

**KEYWORDS:**

ಅಸ್ಪೃಶ್ಯತೆ, ದಲಿತರು, ಬಸವಣ್ಣ, ವಚನ ಚಳುವಳಿ, 12ನೇ ಶತಮಾನ, ಅಸಮಾನತೆ.

ಬಸವಣ್ಣನವರು ಆಗಿನ ಸಮಾಜದಲ್ಲಿದ್ದ ಕಂದಾಚಾರ, ಮೂಢನಂಬಿಕೆ, ಡಾಂಬಿಕತೆ, ಮೋಸ ವಂಚನೆಗಳನ್ನು ದೂರಗೊಳಿಸಲು ಪ್ರಯತ್ನಿಸಿದರು. ಜನರು ಸರಳವಾಗಿ ಅರ್ಥಮಾಡಿಕೊಳ್ಳಲು ಆಡು ಭಾಷೆಯಲ್ಲಿ ತಮ್ಮ ಹಿತನುಡಿಗಳನ್ನು ಬೋಧಿಸಿದರು. ಸಮುದ್ರದಲ್ಲಿರುವ ಅಮೂಲ್ಯ ರತ್ನಗಳನ್ನು ಹೊರ ತಂದಂತೆ ಅಮೃತಮಯವಾದ ವಚನಗಳನ್ನು ತೋರಿಸಿಕೊಟ್ಟರು.

ಇವರದು ಬಹುಮುಖದ ವ್ಯಕ್ತಿತ್ವ. ಧರ್ಮದ ಮುಖವಾಡವನನು ಕಿತ್ತುಹಾಕಿ ಮಾನವ ಧರ್ಮದ ಸ್ಥಾಪನೆ ಮಾಡಿದರು. ಸುಂದರ ಸಮಾಜವನ್ನು ಕಟ್ಟಲು

ಪ್ರಯತ್ನಿಸಿದ ಮಹಾನ್ ವ್ಯಕ್ತಿ ಬಸವಣ್ಣ. ಒಂದು ಕಡೆ ರಾಜ್ಯದ ಅತ್ಯುನ್ನತ ವ್ಯಕ್ತಿಯಾಗಿದ್ದು ಮತ್ತೊಂದು ರೀತಿಯಲ್ಲಿ ನೋಡುವುದಾದರೆ ಸಮಾಜದಲ್ಲಿದ್ದ ಮೇಲು–ಕೀಳು ಎಂಬ ಭಾವನೆ ಜನರ ದುಃಖಗಳನ್ನು ಕಂಡು ಬೇಸರಗೊಂಡು ಮಹಾನ್ ಕ್ರಾಂತಿಕಾರಿಗಳಾದರು.

ಸಮಾಜದಲ್ಲಿ ಸಮಾನತೆ, ಸಹೋದರತೆ ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವೇ ಕಂಡುಬರುತ್ತದೆ. ಆ ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣ ಪೂರಕವಾಗಿ ಪ್ರೀತಿಸಿದ ಚೇತನಗಳು ಆರೋಗ್ಯಕರ ಸಮಾಜಕ್ಕೆ ಚಲನಶೀಲತೆಗೆ ಶ್ರಮಿಸುತ್ತಾ ಬಂದಿರುವವು. ಈ ಪ್ರಯತ್ನ ಹೊಸ ಬೆಳಕನ್ನು ಹುಡುಕುವ ಒಂದು ಮಹಾ ಹೋರಾಟವೇ ಆಗಿದೆ. ಈ ಹೋರಾಟಕ್ಕೆ ತೊಡಗಿದವರಲ್ಲಿ ಕ್ರಿಸ್ತಪೂರ್ವದಲ್ಲಿ ಬರುವ ಮಹಾನ್ ಗೌತಮ ಬುದ್ಧ 12ನೇ ಶತಮಾನದ ಬಸವಣ್ಣ, ಅಲ್ಲಮ, ಸಿದ್ದರಾಮ, ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯ, ಕಾಳವೀರ ಸಂಕವ್ವ, ಬೋಂತಾದೇವಿ, 20ನೇ ಶತಮಾನದ ಅಂಬೇಡ್ಕರ್ ಮೊದಲಾದವರು ಅಂದಂದಿನ ಸಾಮಾಜಿಕ ಅವ್ಯವಸ್ಥೆಯ ಬೀಜಗಳಾದ ಜಾತಿ, ವರ್ಣ, ಲಿಂಗ, ಭೇದ ಅಂಧಶ್ರದ್ದೆಗಳನ್ನು ಮೂಲೋತ್ಪಾಟನೆ ಮಾಡಿ ಆ ಸ್ಥಳದಲ್ಲಿ ''ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು'' ಎಂಬ ತತ್ವದಡಿಯಲ್ಲಿ ಜಾತ್ಯತೀತ ಸಮಾಜದ ರಚನೆಯ ಕನಸನ್ನು ಕಂಡವರು. 12 ಶತಮಾನದ ಎಲ್ಲಾ ಹೋರಾಟ ಚಳುವಳಿಯ ಹಿಂದೆ ಬಸವಣ್ಣ ಒಂದು ಸಂಘಟಿತ ಶಕ್ತಿಯಾಗಿ ನಿಂತಿದ್ದನು ನಾವು ಮರೆಯುವಂತಿಲ್ಲ.

ವರ್ಣವ್ಯವಸ್ಥೆಯ ಬಗ್ಗೆ ಅಸಮಾಧಾನ ತೋರಿಪಡಿಸಿದಂತಹ ಬಸವಣ್ಣನವರು ಹೊಲೆಯನು ಯಾರು? ಮಾದಿಗನಾರು? ಎಂಬ ಪ್ರಶ್ನೆಗೆ ಹೊಲಸ ತಿಂಬುವವನೇ ಹೊಲೆಯ ಕೊಲ್ಲುವವನೇ ಮಾದಿಗ ಎಂದು ತಿಳಿಸಿದರು. ಎಲ್ಲರಿಗೂ ಒಂದೇ ಆಗಿರುವ ನೆಲ ಜಲಗಳನ್ನು ತಿಳಿಸಿದರು. ಸಾಮಾನ್ಯರು ಸಹ ಸರಳವಾಗಿ ಶ್ರೇಷ್ಠ ದಾರಿಯಲ್ಲಿ ನಡೆಯುವಂತೆ ಮಾಡಿದವರು. ಪರಿಶುದ್ಧ ಮನಸ್ಸಿನಿಂದ ಶಿವನನ್ನು ಒಲಿಸಿಕೊಳ್ಳುವ ಮಾರ್ಗವನ್ನು ಜಗತ್ತಿಗೆ ತೋರಿಸಿದವರು. ಅವರ ಜೀವನದ ಉದ್ದೇಶವು ಇಡೀ ಮಾನವ ಜನಾಂಗಕ್ಕಾಗಿತು. ಹೀಗೆ ಬಸವಣ್ಣನವರು ಸಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ರಾಜಕೀಯ ಕ್ಷೇತ್ರದಲ್ಲಿ ಬಹುಕಾಲ ನಿಲ್ಲುವಂತಹ ಕಾರ್ಯವನ್ನು ಮಾಡಿ ತೋರಿಸಿದ್ದಾರೆ.

ಬಸವಣ್ಣನ ಕಾರ್ಯಕ್ಷೇತ್ರವು ಕರ್ನಾಟಕದ ಉತ್ತರ ತುದಿಯ ಕಲ್ಯಾಣದಲ್ಲಿ ಆಗಿದ್ದರು ಆತನು ಆರಂಭಿಸಿದ ಸಾಂಸ್ಕೃತಿಕ ಚಳುವಳಿಯ ಕಾವು ಕರ್ನಾಟಕದ ಗಡಿಯನ್ನು ದಾಟಿ, ತನ್ನ ಕಾಲವನ್ನು ಮೀರಿ ನಿಲ್ಲಬಲ್ಲ ಸಾಮರ್ಥ್ಯ ಹೊಂದಿತು.

“ಕರ್ನಾಟಕದ ಸಾಮಾಜಿಕ ಸಾಂಸ್ಕೃತಿಕ ಲೋಕದಲ್ಲಿ ದಿಢೀರ ಉಲ್ಕೆಯಂತೆ ಮೂಡಿಬಂದು ಕೇವಲ ಕಾಲ ಬೆಳಗ್ಗೆ ಲೋಕಾಶ್ಚರ್ಯವನ್ನುಂಟು ಮಾಡಿ ಅಸ್ತಂಗತವಾದಂತೆ ಅವನು ತೋರಿದರು ಅವನ ಬೆಳವಣಿಗೆ ಕೇವಲ ಆಕಸ್ಮಿಕ ಅಲ್ಲ. ಮತ್ತು ಆತನ ಚಳುವಳಿ ಹಿಂದೂ ಮುಂದಿಲ್ಲದ ಬರೀ ನಡು ಗಡ್ಡೆಯೂ ಅಲ್ಲ.

12ನೇ ಶತಮಾನದಲ್ಲಿ ಬಸವಣ್ಣನ ನೇತೃತ್ವದಲ್ಲಿ ಕಲ್ಯಾಣವನ್ನು ಕೇಂದ್ರವಾಗಿಸಿಕೊಂಡು ಭಕ್ತಿಯ ಪರಿವೇಶ ತೊಟ್ಟುಕೊಂಡು ಹೊಚ್ಚ ಹೊಸ ವಿಚಾರಗಳೊಂದಿಗೆ ನಡೆದ ಚಳುವಳಿ ಇತಿಹಾಸದಲ್ಲಿ ತುಂಬಾ ಭಿನ್ನವಾಗಿ ನಿಲ್ಲುತ್ತದೆ ಭಾರತದ ಸಮಾಜ ವ್ಯವಸ್ಥೆಯ ಜಾತಿ ಪದ್ಧತಿಯ ಏಣಿ ಶ್ರೇಣಿ ಸ್ವರೂಪವನ್ನು ಅಸ್ಪೃಶ್ಯನೆನೆಸಿದ ಪಂಚಮನು ಈ ವ್ಯವಸ್ಥೆಯ ಪಾದವಾದರೆ, ಭೂಸುರನೆನಿಸಿದ ಬ್ರಾಹ್ಮಣ ಇದರ ಶಿರವಾಗಿದ್ದಾನೆ. ಈ ಎರಡು ತುದಿಗಳ ನಡುವೆ ಅನೇಕ ಸ್ತರಗಳಿದ್ದು ಅನೇಕ ಕಸುಬುಗಳಲ್ಲಿ ತೊಡಗಿಸಿಕೊಂಡಿದ್ದ ನೂರಾರು ಜಾತಿಗಳು ಬರುತ್ತವೆ. ಈ ಒಂದೊಂದು ಜಾತಿಗೆ ಸಾಮಾಜಿಕವಾದ ಅದರದೇ ಆದ ಸ್ಥಾನಮಾನಗಳು ಉಂಟು. ಅಲ್ಲದೆ ಇದು ಹುಟ್ಟಿನಿಂದಲೇ ಬರುವಂತದ್ದು ಯಾವುದೇ ಕಾರಣಕ್ಕೂ ಯಾವುದರಿಂದಲೂ ಅಳಿಸಲಾಗದ ಅಂಟಿದು ಊಟೋಪಚಾರ ವೈವಾಹಿಕ ಸಂಬಂಧಗಳು ಆಯಾ ಜಾತಿಗಳಲ್ಲಿ ಮಾತ್ರ ನಡೆಯಬೇಕು ಎಲ್ಲ ಜಾತಿಗಳು ಅವುಗಳ ಸ್ಥಾನಮಾನಕ್ಕೆ ತಕ್ಕ ಕಸುಬುಗಳ ಆಗಿದ್ದು ಆ ಕಸುಬುಗಳಿಗಿರುವ ಶ್ರೇಷ್ಠ ಶ್ರೇಷ್ಠತೆಗೆ ಅನುಸಾರವಾಗಿ ಜಾತಿಗಳ ನಡುವೆ ಮಡಿ ಮೈಲಿಗೆ, ಅಸ್ಪೃಶ್ಯತೆ, ಮೇಲೂ ಕೇಳು ನಿರ್ಧಾರವಾಗಿದೆ. ಇದನ್ನು ಬಸವಣ್ಣರು 12ನೇ ಶತಮಾನದಲ್ಲಿಯೇ ಖಂಡಿಸಿದನು.

**ನಡೆ ನುಡಿ ಸಿದ್ಧಾಂತವಾದಲ್ಲಿ ಕುಲಹೊಲೆಯಿಲ್ಲ**
**ನುಡಿ ಲೇಸು ನಡೆಯ ಧರ್ಮವಾದಲ್ಲಿ ಅದೇ ಬಿಡುಗಡೆ**
**ಇಲ್ಲದ ಹೊಲೆ ಕಳವು ಪರದರಂಗಳಲ್ಲಿ ಹೊಲ ಬನರಿಯದೆ**
**ಕೆಟ್ಟು ನಡೆಯುತ್ತ ಮತ್ತೆ ಕುಲಜರುಂಟೆನೆಂಬ ಒಡಲುಂಟೆ?**
**ಆಚಾರವೇ ಕುಲ ಅನಾಚಾರವೇ ಹೊಲೆ.**

ಅಸತ್ಯದಲ್ಲಿ ನುಡಿದು ವಿಪ್ರರು ತಾವು ಘನವೆಂದು ಹೋರುವ ಹೊತ್ತು ಹೋಕರನ್ನು ತಿರಸ್ಕರಿಸುವ ವಚನ ಇಲ್ಲಿ ಕಾಣುತ್ತೇವೆ. ಅಸ್ಪೃಶ್ಯತೆ ಸಮಾಜಕ್ಕೆ ಅಂಟಿದ ಕಳಂಕ ಎಂಬುದು ಕಂಡಿದ್ದ ಬಸವಣ್ಣನವರು ತಾನು ಜಾತಿ ರಹಿತ ನಾಗಲು ಅನವರತ ನಡೆಸಿದ ಹೋರಾಟ ಗಮನಾರ್ಹವಾಗಿದೆ.

**ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ**
**ಕಷ್ಟತನದ ಹೊರೆಯ ಹೊರಿಸದಿರಯ್ಯ!**
**ಕಕ್ಕಯ್ಯ ನೋಕ್ಕುದನಿಕ್ಕ ನೋಡಯ್ಯ**
**ದಾಸಯ್ಯ ಶಿವದಾನವನ ನೆರೆಯ ನೋಡಯ್ಯ**

**ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ**
**ಉನ್ನತ ಮಹಿಮೆ ಕೂಡಲಸಂಗಮದೇವಾ**
**ಶಿವಧೋ! ಶಿವಧೋ!**
**ಮೇಲಾಗಲೊಲ್ಲೆ ಕೀಳಾಗಲೊಲ್ಲದೆ**
**ಕೀಳುಂಗಲ್ಲದೆ ಹಯನು ಕರೆಯುವುದೇ?**
**ಚೆನ್ನಯ್ಯನ ಮನೆಯ ಮಗ ನಾನು**
**ಆನು ಹಾರುವೆನೆಂದರೆ ಸಂಗಯ್ಯ ನಗುವನು**
**ನಿಮ್ಮ ಶರಣರ ಪಾದಕ್ಕೆ ಚಮ್ಮಾವುಗೆಯ ಮಾಡಯ್ಯ**
**ಕೂಡಲ ಸಂಗಮದೇವ ನಿಮ್ಮ ಸೆರೆಗೊಡ್ಡಿ ಬೇಡುವೆನಯ್ಯ**

ಇಂತಹ ಅನೇಕ ಮಾತುಗಳನ್ನು ಬಸವಣ್ಣನವರ ವಚನಗಳಲ್ಲಿ ಕಾಣುತ್ತೇವೆ. ಬಸವಣ್ಣನವರ ಚಿಂತನೆ, ಹೋರಾಟ ಸಮಾಜವು ಜಾತೀಯ ಅಸ್ಪೃಶ್ಯತೆಯಿಂದ ಮುಕ್ತನಾಗಬೇಕು ಎಂದಾಗಿತ್ತು. ಅದಕ್ಕೆಂದೇ ನೆಲ ನೊಂದೆ ಹೊಲಗೇರಿ ಶಿವಾಲಯಕ್ಕೆ ಎಂದು ಹೇಳಿದರು.

ಅಸ್ಪೃಶ್ಯತೆ ಈ ದೇಶದ ಒಂದು ಜ್ವಲಂತ ಸಮಸ್ಯೆ ಪಶು ಪಕ್ಷಿಗಳೊಂದಿಗೆ ಮುದ್ದಾಡುವ ಮನುಷ್ಯನು ತನ್ನಂತೆಯೇ ಇರುವ ಮನುಷ್ಯನನ್ನು ಅಸ್ಪೃಶ್ಯನನ್ನಾಗಿಸಿ ದೂರ ಇಟ್ಟಿದ್ದು ಈ ವ್ಯವಸ್ಥೆಯ ದೊಡ್ಡ ದುರಂತ ಅಸ್ಪೃಶ್ಯತೆ ನಿವಾರಣೆಗಾಗಿ ಎಲ್ಲರೂ ಮನುಷ್ಯರಂತೆ ಬಾಳಲು ಬಹುದೊಡ್ಡ ಹೋರಾಟ ಮಾಡಿದ ಬಸವಣ್ಣ, ಬಸವಣ್ಣ ಅಂದು ಆಲೋಚಿಸಿದ ವಿಚಾರಗಳೆಲ್ಲ ಇವತ್ತಿಗೂ ಪ್ರಸ್ತುತವಾಗಿದೆ. ದಲಿತನಾಗಿ ಹುಟ್ಟಿ ದಲಿತರಿಗಾಗಿ ಹೋರಾಟ ನಡೆಸುವುದು ಸುಲಭ. ಆದರೆ ದಲಿತೇತರವಾಗಿ ಹುಟ್ಟಿ ದಲಿತಪರ ಹೋರಾಟದ ಮುಂಚೂಣಿಯಲ್ಲಿರುವುದು ತುಂಬಾ ಕಷ್ಟದ ಕೆಲಸ. ಇಂತಹ ಕಷ್ಟದ ಸವಾಲುಗಳನ್ನು ಬಸವಣ್ಣನವರು ಎದುರಿಸಿದರು. ತನ್ನ ಬದುಕಿನುದ್ದಕ್ಕೂ ಬಡವರ ಜೊತೆ ತನ್ನನ್ನು ತಾನು ಸಮಿಕರಿಸಿಕೊಳ್ಳಲು ಯತ್ನಿಸಿದ ಬಸವಣ್ಣ ಅಂದಿನ ಆಂದೋಲನದ ಕೇಂದ್ರ ವ್ಯಕ್ತಿಯಾಗಿದ್ದವನು.

## ಪರಾಮರ್ಶನ ಗ್ರಂಥಗಳು:

1. ರಾಮರಾವ್ ಸರೋದೆ. (2009). ಬದಲಾವಣೆಗೆ ಬಸವಣ್ಣನವರ ಮತ್ತು ಸರ್ವಜ್ಞನ ವಚನಗಳು. ಕಾಯಕಯೋಗಿ ಪ್ರಕಾಶನ. ನೆಲಮಂಗಲ.
2. ಚಂದ್ರಶೇಖರಯ್ಯ. (1997). ಬಸವಣ್ಣ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
3. ಬಸವರಾಜ ಸಬರದ. (1991). ಬಸವಣ್ಣ ಮತ್ತು ಪ್ರಸ್ತುತ ಸಾಮಾಜಿಕ ಸಂದರ್ಭ. ಪ್ರಸಾರಂಗ, ಗುಲ್ಬರ್ಗ ವಿಶ್ವವಿದ್ಯಾಲಯ. ಕಲ್ಬುರ್ಗಿ.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.